# ಇಂದಿನಿಂದ ಜೋಸಾ ಕೌನ್ಸೆಲಿಂಗ್

## ಐಐಟಿ, ಎನ್ಐಟಿ, ಐಐಐಟಿ ಮತ್ತಿತರ ಜಿಎಫ್‌ಟಿಐ ಪ್ರವೇಶ ಪ್ರಕ್ರಿಯೆ

**ಮಂಗಳೂರು:** ಐಐಟಿಗಳಿಗೆ ಜಂಟಿ ಸಮಾಲೋಚನೆ ಮತ್ತು ಸೀಟು ಹಂಚಿಕೆಗಾಗಿ ಕೇಂದ್ರ ಸೀಟು ಹಂಚಿಕೆ ಮಂಡಳಿ (ಸಿಎಸ್ಎಬಿ) ಮತ್ತು ಐಐಟಿ ಜಂಟಿ ಪ್ರವೇಶ ಮಂಡಳಿ (ಜೆಎಬಿ- ಐಐಟಿ) ಮತ್ತು ಎನ್ಐಟಿ+ ವ್ಯವಸ್ಥೆ ಒಳಗೊಂಡ ಜಂಟಿ ಸೀಟು ಹಂಚಿಕೆ ಪ್ರಾಧಿಕಾರವನ್ನು (ಜೆಓಎಸ್ಎಎ) ಶಿಕ್ಷಣ ಸಚಿವಾಲಯ ರಚಿಸಿದೆ.

ಇದು 31 ಎನ್ಐಟಿಗಳು, ಐಐಎಸ್‌ಟಿ ಶಿಬ್‌ಪುರ, 26 ಐಐಐಟಿಗಳು, 3 ಯೋಜನೆ ಮತ್ತು ವಾಸ್ತುಶಿಲ್ಪ ಶಾಲೆಗಳು (ಎಸ್ಪಿಎಗಳು) ಮತ್ತು 37 ಜಿಎಫ್‌ಟಿಐಗಳು(ಕೇಂದ್ರ/ರಾಜ್ಯ ಸರಕಾರದ ಅನುದಾನಿತ ತಾಂತ್ರಿಕ ಸಂಸ್ಥೆಗಳು) ಒಳಗೊಂಡಿದೆ. ಜೋಸಾ-2024ರ ಸಹ ಅಧ್ಯಕ್ಷರೂ ಆಗಿರುವ ಎನ್ಐಟಿಕೆ ನಿರ್ದೇಶಕ ಪ್ರೊ.ಬಿ.ರವಿ ಅಧ್ಯಕ್ಷತೆಯಲ್ಲಿ ಸುರತ್ಕಲ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ-ಕರ್ನಾಟಕ (ಎನ್ಐಟಿಕೆ)ಕ್ಕೆ ಸಿಎಸ್ಎಬಿ-2024 ವಹಿಸಲಾಗಿದೆ.

ಎನ್ಐಟಿಕೆ ಸುರತ್ಕಲ್, ಐಐಟಿ ಮದ್ರಾಸ್ (ಜೆಎಬಿ-ಐಐಟಿ)ನೊಂದಿಗೆ ಜೋಸಾ- 2024ಗಾಗಿ ಜಂಟಿಯಾಗಿ ಸಮನ್ವಯ ನಡೆಸಲಿದೆ. ಐಐಟಿಗಳಿಗೆ ಸೀಟು ಹಂಚಿಕೆ ಅಭ್ಯರ್ಥಿಗಳ ಜೆಇಇ (ಅಡ್ವಾನ್ಸ್‌ಡ್) ಶ್ರೇಯಾಂಕ ಆಧರಿಸಿದೆ. ಆದರೆ ಎನ್ಐಟಿ+ ವ್ಯವಸ್ಥೆಗೆ ಸೀಟು ಹಂಚಿಕೆ ಅಭ್ಯರ್ಥಿಗಳ ಜೆಇಇ(ಮುಖ್ಯ) ಶ್ರೇಯಾಂಕವನ್ನು ಆಧರಿಸಿದೆ. ಜೆಇಇ (ಮುಖ್ಯ) ಅರ್ಹತೆ ಪಡೆದ ಎಲ್ಲ ಅಭ್ಯರ್ಥಿಗಳು ಎನ್ಐಟಿ+ ವ್ಯವಸ್ಥೆಯಲ್ಲಿ ಭಾಗವಹಿಸಲು ಅರ್ಹರಾಗಿದ್ದಾರೆ.

ಸುಮಾರು 15 ಲಕ್ಷ ಜೆಇಇ-2024 (ಮುಖ್ಯ) ಅಭ್ಯರ್ಥಿಗಳು ಎನ್ಐಟಿ+ ಸಿಸ್ಟಂಗಾಗಿ ಸುಮಾರು 42 ಸಾವಿರ ಸೀಟುಗಳಿಗೆ ಭಾಗವಹಿಸಲು ಅರ್ಹರಾಗಿದ್ದಾರೆ. ನಾನಾ ವರ್ಗಗಳಿಗೆ (ಇಡಬ್ಲ್ಯುಎಸ್/ ಒಬಿಸಿ-ಎನ್ಸಿಎಲ್/ಎಸ್ಸಿ/ಎಸ್ಟಿ/ಪಿಡಬ್ಲ್ಯುಡಿ) ಸ್ಥಾನಗಳನ್ನು ಕಾಯ್ದಿರಿಸುವುದು ಭಾರತ ಸರಕಾರದ ಮಾನದಂಡಗಳ ಪ್ರಕಾರವಾಗಿದೆ. 12ನೇ ತರಗತಿ(ಅಥವಾ ತತ್ಸಮಾನ) ಪರೀಕ್ಷೆಯಲ್ಲಿ ಶೇ.75 (ಸಾಮಾನ್ಯ/ಇಡಬ್ಲ್ಯೂಎಸ್/ಒಬಿಸಿ-ಎನ್ಸಿಎಲ್) ಅಥವಾ ಶೇ.65(ಎಸ್ಸಿ/ಎಸ್ಟಿ/ಪಿಡಬ್ಲ್ಯುಡಿ) ಪಡೆದ ಎಲ್ಲ ಅಭ್ಯರ್ಥಿಗಳು ಕೌನ್ಸೆಲಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ.

ಪರ್ಯಾಯವಾಗಿ ಅಭ್ಯರ್ಥಿಯು 12ನೇ ತರಗತಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಆಯಾ ವರ್ಗದ ಅಗ್ರ 20 ಪರ್ಸೆಂಟೈಲ್‌ನಲ್ಲಿರಬೇಕು. ಜೂ.10ರಿಂದ ಪ್ರಾರಂಭವಾಗುವ ಜೋಸಾ ಪೋರ್ಟಲ್ ಮೂಲಕ ಐದು ಸುತ್ತಿನ ಕೌನ್ಸೆಲಿಂಗ್ ನಡೆಸಲಾಗುವುದು. ಅಭ್ಯರ್ಥಿಗಳು ಜೂ.10ರಿಂದ 121 ನಾನಾ ಉನ್ನತ ಶಿಕ್ಷಣ ಸಂಸ್ಥೆಗಳಿಂದ ತಮ್ಮ ಆಯ್ಕೆಯ ಕೋರ್ಸ್‌ಗಳಿಗೆ ನೋಂದಣಿ ಪ್ರಾರಂಭಿಸಬಹುದು ಮತ್ತು ಜೂ.18ರೊಳಗೆ ತಮ್ಮ ಆಯ್ಕೆಗಳನ್ನು ಲಾಕ್ ಮಾಡಬಹುದು. ಅಭ್ಯರ್ಥಿಗಳು ಮತ್ತು ಪೋಷಕರು ನವೀಕರಣಗಳಿಗಾಗಿ ಜೋಸಾ/ಸಿಎಸ್ಎಬಿ-2024 ವೆಬ್‌ಸೈಟ್ https://josaa.nic.in ನಿಯಮಿತವಾಗಿ ಪರಿಶೀಲಿಸಲು ಪ್ರೊ.ಬಿ.ರವಿ ತಿಳಿಸಿದ್ದಾರೆ.

### ಪ್ರಮುಖ ದಿನಾಂಕ, ಪ್ರಕ್ರಿಯೆ

- ಅಭ್ಯರ್ಥಿ ನೋಂದಣಿ/ಆಯ್ಕೆ ಭರ್ತಿ: ಜೂ.10-18
- ಅಣಕು ಸೀಟು ಹಂಚಿಕೆ-1 ಮತ್ತು 2: ಜೂ.15 ಮತ್ತು 17
- ಆಯ್ಕೆಗಳ ಲಾಕಿಂಗ್: ಜೂ.18
- ಸೀಟು ಹಂಚಿಕೆ (ರೌಂಡ್ 1): ಜೂ.20
- ಆನ್‌ಲೈನ್ ವರದಿ(ಶುಲ್ಕ ಪಾವತಿ/ಡಾಕ್ಯುಮೆಂಟ್ ಅಪ್ಲೋಡ್, ರೌಂಡ್ 1): ಜೂ.20-24
- ಸೀಟು ಹಂಚಿಕೆ(ರೌಂಡ್ 2): ಜೂ.27
- ಸೀಟು ಹಂಚಿಕೆ(ರೌಂಡ್ 3): ಜು.4
- ಸೀಟು ಹಂಚಿಕೆ(ರೌಂಡ್ 4): ಜು.10
- ಸೀಟು ಹಂಚಿಕೆ(ರೌಂಡ್ 5): ಜು.17
- ಸಿಎಸ್ಆರ್‌ಬಿ ವಿಶೇಷ ಸುತ್ತಿನ ಕೌನ್ಸೆಲಿಂಗ್(ರೌಂಡ್ 1 ಮತ್ತು 2): ಜು.29-ಆ.11.
- ಸಿಎಸ್ಎಬಿ-ಎನ್ಇಯುಟಿ-2024 ಕೌನ್ಸೆಲಿಂಗ್(ರೌಂಡ್ 1 ಮತ್ತು 2): ಜೂ.17ರಿಂದ ಆ.8.
- ಸಿಎಸ್ಎಬಿ ಸೂಪರ್ ನ್ಯೂಮರರಿ ಕೌನ್ಸೆಲಿಂಗ್: ಆ.14ರಿಂದ 19

Vijaya Karnataka, Date: 10/06/24, p, no-06